# ಕರ್ನಾಟಕ ನಾಟಕ ಅಕಾಡೆಮಿ, ಬೆಂಗಳೂರು
## ಸ್ಥಾಯಿ ಸಮಿತಿ ಸದಸ್ಯರ ಸಭೆಯ ನಡಾವಳಿ.

ದಿನಾಂಕ 16/12/2019 ರಂದು ಬೆಂಗಳೂರಿನ ಕನ್ನಡಭವನದ ಅಂತರಂಗದಲ್ಲಿ ನಡೆದ ಕರ್ನಾಟಕ ನಾಟಕ ಅಕಾಡೆಮಿಯ ಸ್ಥಾಯಿಸಮಿತಿ ಸದಸ್ಯರ ಸಭೆಯ ನಡಾವಳಿ.

ಉಪಸ್ಥಿತರು : ಸರ್ವಶ್ರೀ / ಶ್ರೀಮತಿ

| | | |
|---|---|---|
| 1. | ಪ್ರೊ: ಭೀಮಸೇನ.ಆರ್. | ಅಧ್ಯಕ್ಷರು |
| 2. | ಎಂ.ಎಸ್.ಗುಣಶೀಲನ್ | ಸದಸ್ಯರು |
| 3. | ಕೆ.ಆರ್.ಪ್ರಕಾಶ್ | ಸದಸ್ಯರು |
| 4. | ಹೆಚ್.ಎಂ.ನಾಗರಾಜರಾವ್ | ಸದಸ್ಯರು |
| 5. | ಯಶವಂತ ಸರದೇಶಪಾಂಡೆ | ಸದಸ್ಯರು |
| 6. | ಡಾ.ಶೈಲಜಾ ಎ.ಸಿ | ರಿಜಿಸ್ಟ್ರಾರ್.ಕ.ನಾ.ಅ |

ಅನುಪಸ್ಥಿತರು :

| | | |
|---|---|---|
| 1. | ಶ್ರೀ ಕಲ್ಲೇಶ್ | ಅರ್ಥ ಸದಸ್ಯರು |

ಹಾಜರಿದ್ದ, ಎಲ್ಲಾ ಸದಸ್ಯರನ್ನು ಅಕಾಡೆಮಿ ರಿಜಿಸ್ಟ್ರಾರ್, ಡಾ.ಶೈಲಜಾ ಎ.ಸಿ. ಅವರು ಸ್ವಾಗತಿಸಿ, ಸಭೆಯ ಅಧ್ಯಕ್ಷತೆಯನ್ನು ಅಧ್ಯಕ್ಷರಾದ ಪ್ರೊ.ಭೀಮಸೇನ್.ಆರ್ ಅವರು ವಹಿಸಿಕೊಂಡು ಮುಂದಿನ ಕಾರ್ಯಗಳನ್ನು ನಿರ್ವಹಿಸಬೇಕೆಂದು ಕೋರಿದರು. ಅಧ್ಯಕ್ಷರು ಎಲ್ಲರನ್ನು ಉದ್ದೇಶಿಸಿ ಮಾತನಾಡಿ, ಪ್ರಸ್ತುತ ಕ್ರಿಯಾಯೋಜನೆಯಲ್ಲಿ ಹಮ್ಮಿಕೊಂಡಿರುವ ಎಲ್ಲಾ ಯೋಜನೆಗಳು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ತಿಳಿಸಿದರು ಮತ್ತು ಇನ್ನು ಮುಂದೆ ಅಕಾಡೆಮಿಯಿಂದ ನಡೆಯುವ ಎಲ್ಲಾ ಶಿಬಿರಗಳು ಮತ್ತು ನಾಟಕೋತ್ಸವ ಮುಂತಾದ ಕಾರ್ಯಕ್ರಮಗಳಿಗೆ ನೆನಪಿನ ಕಾಣಿಕೆಗಳನ್ನು ನೀಡುವ ಬದಲಾಗಿ ಅಕಾಡೆಮಿಯ ಪ್ರಕಟಣೆಗಳನ್ನು ನೀಡುವ ಬಗ್ಗೆ ಚರ್ಚಿಸಿದರು. ಇದಕ್ಕೆ ಸಭೆ ಅನುಮೋದನೆ ನೀಡಿತು.

### 1. ದಾಖಲೀಕರಣ

ಮಾರ್ಚ್ ತಿಂಗಳೊಳಗೆ ದಾಖಲೀಕರಣ ಯೋಜನೆಯ ಉದ್ಘಾಟನೆ ಮಾಡಬೇಕಾಗಿರುವುದರಿಂದ ಈ ಯೋಜನೆಯ ಕೆಲಸ ಕಾರ್ಯಗಳು ಕುಂಠಿತಗೊಂಡಿರುವುದನ್ನು ಚರ್ಚಿಸಿದ ಸಭೆಯು, ವಾರದಲ್ಲಿ ಎರಡು ಬಾರಿ ಅಕಾಡೆಮಿಗೆ ಭೇಟಿ ನೀಡಿ, ದಾಖಲೀಕರಣ ಯೋಜನೆಯ ಕಾರ್ಯಚಟುವಟಿಕೆಯ ಬಗ್ಗೆ ಗಮನಹರಿಸಲು ಸಂಚಾಲಕರಾದ ಜೋಸೆಫ್ ಅವರಿಗೆ ತಿಳಿಸಲು ಸಭೆ ತೀರ್ಮಾನಿಸಿತು.

### 2. ಹೊರರಾಜ್ಯ ನಾಟಕೋತ್ಸವ: ಹೈದ್ರಾಬಾದ್ ನಾಟಕೋತ್ಸವ

ಕರ್ನಾಟಕ ನಾಟಕ ಅಕಾಡೆಮಿಯಿಂದ 2020 ಫೆಬ್ರವರಿ 7, 8 ಮತ್ತು 9ನೇ ತಾರೀಖಿನಂದು ಹೈದ್ರಾಬಾದ್‌ನಲ್ಲಿ ಮೂರು ದಿನಗಳ ಹೊರರಾಜ್ಯ ನಾಟಕೋತ್ಸವವನ್ನು ಕರ್ನಾಟಕ ಸಾಹಿತ್ಯ ಮಂದಿರ, ಕಾಚೀಗೂಡ, ಹೈದ್ರಾಬಾದ್ ಸಹಯೋಗದಲ್ಲಿ ನಡೆಸಲು ತೀರ್ಮಾನಿಸಿದ್ದು, ಕನ್ನಡ ಮತ್ತು ಸಂಸ್ಕೃತಿ ಇಲಾಖಾ ಸಚಿವರಾದ ಮಾನ್ಯ ಶ್ರೀ ಸಿ.ಟಿ.ರವಿ ಅವರಿಂದ ದಿನಾಂಕ 7-2-2019 ರಂದು ಕಾರ್ಯಕ್ರಮದ ಉದ್ಘಾಟನೆಯನ್ನು ನೆರವೇರಿಸಲು ಸಭೆ ತೀರ್ಮಾನಿಸಿತು.

ಈ ಕಾರ್ಯಕ್ರಮದ ಸದಸ್ಯ ಸಂಚಾಲಕರಾದ ಶ್ರೀ ಎಂ.ಎಸ್.ಗುಣಶೀಲನ್ ಅವರು ಪೂರ್ವಭಾವಿ ಸಿದ್ಧತೆಗಾಗಿ ಹೈದ್ರಾಬಾದ್‌ಗೆ ಹೋಗಿ ಬಂದಿದ್ದು, ಕಲಾತಂಡಗಳು ಉಳಿದುಕೊಳ್ಳಲು ವಸತಿ ಸೌಕರ್ಯ, ಕಲಾತಂಡದ ಕಲಾವಿದರಿಗೆ ತಿಂಡಿ, ಊಟದ ವ್ಯವಸ್ಥೆ, ಸಭಾಂಗಣದ ವ್ಯವಸ್ಥೆಯನ್ನು ಕರ್ನಾಟಕ ಸಾಹಿತ್ಯ ಮಂದಿರ ಅವರು ವಹಿಸಿಕೊಳ್ಳಲಿದ್ದು, ಸಭಾಂಗಣದಲ್ಲಿ ನಾಟಕ ಪ್ರದರ್ಶನಕ್ಕೆ ಲೈಟಿನ ವ್ಯವಸ್ಥೆಯ ಕೊರತೆಯಿದ್ದು, ಲೈಟ್‌ಗಳನ್ನು ಹೊರಗಡೆಯಿಂದ ಖರೀದಿ ಮಾಡಬೇಕೆಂದು ತಿಳಿಸಿದರು. ಲೈಟಿನ ವ್ಯವಸ್ಥೆಗೆ ಅಂದಾಜು ದಿನವೊಂದಕ್ಕೆ ರೂ.5,000/-ದಂತೆ ಮೂರು ದಿನಕ್ಕೆ ರೂ.15,000/- ಮತ್ತು ಅಲ್ಲಿನ ಸ್ಥಳೀಯ ಸಾರಿಗೆ ವ್ಯವಸ್ಥೆಗಾಗಿ ದಿನವೊಂದಕ್ಕೆ ಅಂದಾಜು ರೂ.2,500/-ಯಂತೆ 4 ದಿನಕ್ಕೆ ರೂ.10,000/- ಒಟ್ಟು ರೂ.25,000/-ಗಳನ್ನು ಸಂಸ್ಥೆಯವರಿಗೆ ನೀಡಲು ಸಭೆ ತೀರ್ಮಾನಿಸಿತು. **ನಿಗದಿಪಡಿಸಿರುವ ಮೊತ್ತಕ್ಕಿಂತ ಕಾರ್ಯಕ್ರಮದ ವೆಚ್ಚ ಹೆಚ್ಚಾದಲ್ಲಿ, ಕ್ರಿಯಾಯೋಜನೆಯ ಬೇರೆ ಶೀರ್ಷಿಕೆಯಿಂದ ಹೆಚ್ಚಾಗಿ ಬರಬಹುದಾದ ಮೊತ್ತವನ್ನು ಮರುಹೊಂದಾಣಿಕೆ ಮಾಡಿಕೊಳ್ಳಲು ಸಭೆ ತೀರ್ಮಾನಿಸಿತು.**

ದಿನಾಂಕ : 7-2-2019 ರಿಂದ 9-2-2019 ರವರೆಗೆ

ಸ್ಥಳ: ಕರ್ನಾಟಕ ಸಾಹಿತ್ಯ ಮಂದಿರ, ಕಾಚಿಗೂಡ, ಹೈದ್ರಾಬಾದ್

ನಾಟಕೋತ್ಸವಕ್ಕೆ ನಿಗದಿಪಡಿಸಿರುವ ಮೊತ್ತ ರೂ.3ಲಕ್ಷ

**ನಾಟಕಗಳ ವಿವರ**

| ಕ್ರ.ಸಂ | ತಂಡದ ಹೆಸರು | ನಾಟಕದ ಹೆಸರು | ರಚನೆ | ನಿರ್ದೇಶನ |
|---|---|---|---|---|
| 1 | ಬೆಂಗಳೂರು ಏಷ್ಯನ್ ಥಿಯೇಟರ್ಸ್, ಬೆಂಗಳೂರು | ಬೂಟುಕಾಲಿನ ಸದ್ದು | ಜಂಬಣ್ಣ ಅವರ ಕಾದಂಬರಿ ಆಧಾರಿತ | ಸಿದ್ದರಾಮ ಕೊಪ್ಪರ್ |
| 2 | ರಂಗಶಿಕ್ಷಣ ಕೇಂದ್ರ, ನೆಲಮಂಗಲ | ನೆರದಲಗ | ಕನಕದಾಸರ ಕಾವ್ಯ ಆಧಾರಿತ ನಾಟಕ | ಡಾ.ಪುಷ್ಪಲತಾ |
| 3 | ಬಿ.ಲಕ್ಷ್ಮೀಪತಿ ತಂಡದವರಿಂದ | ಗಂಡುಗಲಿ ಎಚ್ಚಮ | ಶ್ರೀ ಶೇಷಾದ್ರಿ | |

ಕಾರ್ಯಕ್ರಮದ ಅಂದಾಜು ವೆಚ್ಚ

| ಕ್ರ.ಸಂ | ಕಾರ್ಯಕ್ರಮದ ವಿವರ | ಅಂದಾಜು ಮೊತ್ತ ರೂ. |
|---|---|---|
| 1 | 3 ನಾಟಕಗಳ ಸಂಭಾವನೆ ( ತಲಾ ರೂ.50,000/-ದಂತೆ) | 1,50,000/- |
| 2 | ಬೆಳಕಿನ ವ್ಯವಸ್ಥೆ, ವಾಹನದ ವ್ಯವಸ್ಥೆ | 25,000/- |
| 3 | ಆಹ್ವಾನ ಪತ್ರಿಕೆ, ಕರಪತ್ರ, ಪ್ರಚಾರ, ಬ್ಯಾನರ್ | 20,000/- |
| 4 | ಸಂಚಾಲಕರ ಭತ್ಯೆ | 10,000/- |
| 5 | ಪೂರ್ವಸಿದ್ಧತೆ /ತಯಾರಿ / ಪತ್ರಿಕಾಗೋಷ್ಠಿ | 20,000/- |
| 6 | ಸಮಾರಂಭದ ವೆಚ್ಚ / ಸಹಾಯಕರ ಭತ್ಯೆ | 5,000/- |
| 7 | ಸದಸ್ಯರ ಭತ್ಯೆ, ವಸತಿ ಹಾಗೂ ಸಿಬ್ಬಂದಿಯ ಭತ್ಯೆ | 70,000/- |
| | ಒಟ್ಟು ರೂ. | 3,00,000/- |

ಊಟ, ವಸತಿ, ರಂಗಮಂದಿರ ಬಾಡಿಗೆ, ಫೋಟೋ ಮತ್ತು ವಿಡಿಯೋ ವ್ಯವಸ್ಥೆಯನ್ನು ಮಾಡಲು ಸದಸ್ಯ ಸಂಚಾಲಕರು ಅಕಾಡೆಮಿಯೊಂದಿಗೆ ಸಹಕರಿಸುವಂತೆ ಕೋರಲಾಯಿತು. ಆಹ್ವಾನಪತ್ರಿಕೆ, ಕರಪತ್ರ, ಪ್ರಮಾಣಪತ್ರ, ಬ್ಯಾನರ್‌ಗಳನ್ನು ಅಕಾಡೆಮಿಯಿಂದ ವ್ಯವಸ್ಥೆ ಮಾಡಲಾಗುವುದು. **ತಂಡದ ಎಲ್ಲಾ ಕಲಾವಿದರುಗಳಿಗೆ ಅಕಾಡೆಮಿಯ ಪ್ರಕಟಣೆಗಳನ್ನು ಉಚಿತವಾಗಿ ನೀಡಲು ಸಭೆ ಅನುಮೋದಿಸಿತು.** ನಾಟಕೋತ್ಸವದ ಎಲ್ಲಾ ವೆಚ್ಚಗಳನ್ನು ನಿಯಮಾನುಸಾರ ನಿಗದಿಪಡಿಸಿರುವ ಮೊತ್ತದಲ್ಲಿ ಭರಿಸಲು ಸಭೆ ಅನುಮೋದಿಸಿತು.

3. ಹೊರರಾಜ್ಯ ನಾಟಕೋತ್ಸವ: ಚಂಡಿಗಡ ನಾಟಕೋತ್ಸವ

ಸದಸ್ಯ ಸಂಚಾಲಕರಾದ ಶ್ರೀ ಯಶವಂತ ಸರದೇಶಪಾಂಡೆ ಅವರ ನೇತೃತ್ವದಲ್ಲಿ ಕರ್ನಾಟಕ ನಾಟಕ ಅಕಾಡೆಮಿಯಿಂದ 2020 ಮಾರ್ಚ್ ಮೊದಲನೇ ವಾರದಲ್ಲಿ ಚಂಡೀಗಡದಲ್ಲಿ ಮೂರು ದಿನಗಳ ನಾಟಕೋತ್ಸವ ನಡೆಸಲು ಸಭೆ ತೀರ್ಮಾನಿಸಿತು.

ಸಿದ್ಧಾಪುರ ನಾಟಕೋತ್ಸವ

ಕರ್ನಾಟಕ ನಾಟಕ ಅಕಾಡೆಮಿಯಿಂದ 2020 ಜನವರಿ 25 ರಿಂದ 28ರವರೆಗೆ 4 ದಿನಗಳ ಹವ್ಯಾಸಿ ನಾಟಕೋತ್ಸವವನ್ನು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರದಲ್ಲಿ ನಡೆಸಲು ತೀರ್ಮಾನಿಸಿದ್ದು, ಈ ಕೆಳಕಂಡ ನಾಟಕಗಳನ್ನು ಮತ್ತು ತಂಡಗಳನ್ನು ಸಭೆಯು ಆಯ್ಕೆ ಮಾಡಿತು.

ದಿನಾಂಕ : 25-01-2020 ರಿಂದ 28-01-2020 ರವರೆಗೆ

ಸ್ಥಳ: ಸಿದ್ಧಾಪ್ಪುರ, ಉತ್ತರ ಕನ್ನಡ ಜಿಲ್ಲೆ, ನಾಟಕೋತ್ಸವಕ್ಕೆ ನಿಗದಿಪಡಿಸಿರುವ **ಮೊತ್ತ ರೂ.4ಲಕ್ಷ**

ನಾಟಕಗಳ ವಿವರ

| ಕ್ರ.ಸಂ. | ತಂಡದ ಹೆಸರು | ನಾಟಕದ ಹೆಸರು | ರಚನೆ | ನಿರ್ದೇಶನ | ಸಾರಿಗೆ, ಸಂಭಾವನೆ ಸೇರಿದಂತೆ ಒಟ್ಟು ಮೊತ್ತ ರೂ. |
|---|---|---|---|---|---|
| 1 | ಅಂಕಸಂಸಾರ(ರಿ)ಶಿರಸಿ | ಅಂಧಯುಗ | | ರಮಾನಂದ ಐನಕೈ | 35,000/- |
| 2 | ಒಡ್ಡೋಲಗ(ರಿ)ಹಿತ್ಲಕೈ | ರಾಮಾಯಣ ಆಧಾರಿತ | | | 35,000/- |
| 3 | ಕೆ.ವಿ.ಸುಬ್ಬಣ್ಣ ರಂಗಸಮೂಹ(ರಿ), ಹೆಗ್ಗೋಡು | ದೇವದಾಸಿ | ಕೆ.ಹಿರಣ್ಣಯ್ಯ | ಪರಶುರಾಮ ವಿ ಗುಟ್ಟಳ್ಳಿ | 45,000/- |
| 4 | ನೃತ್ಯನಿಕೇತನ ಕೊಡವೂರು | ಚಿತ್ರಾ | ರವೀಂದ್ರನಾಥ್ ಠಾಗೋರ್ | ಡಾ.ಶ್ರೀಪಾದ ಭಟ್ | 45,000/- |

ಆಹ್ವಾನಪತ್ರಿಕೆ, ಪ್ರಮಾಣಪತ್ರ, ಬ್ಯಾನರ್‌ಗಳನ್ನು ಅಕಾಡೆಮಿಯಿಂದ ವ್ಯವಸ್ಥೆ ಮಾಡಲಾಗುವುದು. ಊಟ, ವಸತಿ, ರಂಗಮಂದಿರ ಬಾಡಿಗೆ, ಫೋಟೋ ಮತ್ತು ವಿಡಿಯೋ, ಸ್ಥಳೀಯ ಆತಿಥ್ಯದ ವ್ಯವಸ್ಥೆಯನ್ನು ಅಕಾಡೆಮಿ ಮಾಡಲು ಸದಸ್ಯ ಸಂಚಾಲಕರು ಅಕಾಡೆಮಿಯೊಂದಿಗೆ ಸಹಕರಿಸುವಂತೆ ಕೋರಲಾಯಿತು. **ತಂಡದ ಎಲ್ಲಾ ಕಲಾವಿದರುಗಳಿಗೆ ಅಕಾಡೆಮಿಯ ಪ್ರಕಟಣೆಗಳನ್ನು ಉಚಿತವಾಗಿ ನೀಡಲು ಸಭೆ ಅನುಮೋದಿಸಿತು**. ನಾಟಕೋತ್ಸವದ ಎಲ್ಲಾ ವೆಚ್ಚಗಳನ್ನು ನಿಯಮಾನುಸಾರ ನಿಗದಿಪಡಿಸಿರುವ ಮೊತ್ತದಲ್ಲಿ ಭರಿಸಲು ಸಭೆ ಅನುಮೋದಿಸಿತು.

ವೃತ್ತಿಕಂಪನಿ ನಾಟಕೋತ್ಸವ :ಚಿಕ್ಕಮಗಳೂರು

ಕರ್ನಾಟಕ ನಾಟಕ ಅಕಾಡೆಮಿಯಿಂದ 2020 ಫೆಬ್ರವರಿ 12 ರಿಂದ 14 ರವರೆಗೆ 3 ದಿನಗಳ ನಾಟಕೋತ್ಸವವನ್ನು ಸದಸ್ಯರಾದ ಹೆಚ್.ಎಂ.ನಾಗರಾಜರಾವ್ ಅವರ ಸಂಚಾಲಕತ್ವದಲ್ಲಿ ನಡೆಸಲು ತೀರ್ಮಾನಿಸಿದ್ದು, ನಾಟಕಗಳ ಮತ್ತು ತಂಡಗಳ ಆಯ್ಕೆಯನ್ನು ಮುಂದಿನ ಸಭೆಯಲ್ಲಿ ಅಂತಿಮಗೊಳಿಸಲು ಸಭೆ ತೀರ್ಮಾನಿಸಿತು. ಈ ನಾಟಕೋತ್ಸವಕ್ಕೆ ನಿಗದಿಪಡಿಸಿರುವ ರೂ.6ಲಕ್ಷ ಮೊತ್ತದಲ್ಲಿ ನಾಟಕೋತ್ಸವಕ್ಕೆ ರೂ.5ಲಕ್ಷ ನಿಗದಿಪಡಿಸಿ, ಉಳಿದ ರೂ.1ಲಕ್ಷದಲ್ಲಿ ಗಾಂಧೀ-150 ಕಾರ್ಯಕ್ರಮದ ಪ್ರಯುಕ್ತ ಏಕಾಂಕ ನಾಟಕ ಸ್ಪರ್ಧೆಯನ್ನು ಚಿಕ್ಕಮಗಳೂರು ಜಿಲ್ಲೆಯಾದ್ಯಂತ ತಾಲ್ಲೂಕು ಮತ್ತು ಜಿಲ್ಲಾಮಟ್ಟದಲ್ಲಿ ನಡೆಸಲು ಮತ್ತು ಈ ಕಾರ್ಯಕ್ರಮದ ಖರ್ಚುವೆಚ್ಚವನ್ನು ನಿಯಮಾನುಸಾರ ಭರಿಸಲು ಸಭೆಯು ಅನುಮೋದನೆ ನೀಡಿತು.

**ವೃತ್ತಿ ರಂಗಭೂಮಿ ನಾಟಕೋತ್ಸವ : ಹುಬ್ಬಳ್ಳಿ**

ಚಿಕ್ಕಮಗಳೂರಿನಲ್ಲಿ ಸದಸ್ಯ ಸಂಚಾಲಕರಾದ ಶ್ರೀ ನಾಗರಾಜ್‌ರಾವ್ ಕಲ್ಕಟ್ಟೆ ಅವರ ನೇತೃತ್ವದಲ್ಲಿ ಫೆಬ್ರವರಿ ತಿಂಗಳಲ್ಲಿ ವೃತ್ತಿರಂಗಭೂಮಿ ನಾಟಕೋತ್ಸವ ಏರ್ಪಡಿಸಲು ಮತ್ತು ಸದಸ್ಯ ಸಂಚಾಲಕರಾದ ಶ್ರೀ ಯಶವಂತ ಸರದೇಶಪಾಂಡೆ ಅವರ ನೇತೃತ್ವದಲ್ಲಿ 2020 ಮಾರ್ಚ್ ಮೂರನೇ ವಾರದಲ್ಲಿ ಹುಬ್ಬಳ್ಳಿಯಲ್ಲಿ ಮೂರು ದಿನಗಳ ವೃತ್ತಿರಂಗಭೂಮಿ ನಾಟಕೋತ್ಸವ ನಡೆಸಲು ಸಭೆ ತೀರ್ಮಾನಿಸಿತು. ಹಾಗೂ ಮುಂದಿನ ಸಭೆಯಲ್ಲಿ ಇದರ ರೂಪುರೇಷೆಗಳನ್ನು ಅಂತಿಮಗೊಳಿಸಲು ನಿರ್ಧರಿಸಲಾಯಿತು.

**ವಿಶೇಷಘಟಕ ಯೋಜನೆ ಮತ್ತು ಗಿರಿಜನ ಉಪಯೋಜನೆಯಡಿ ವಸತಿ ರಂಗತರಬೇತಿ ಶಿಬಿರಗಳು**

ವಿಶೇಷಘಟಕ ಯೋಜನೆಯಡಿ ರಂಗತರಬೇತಿ ಶಿಬಿರಕ್ಕೆ 67 ಅರ್ಜಿಗಳು ಮತ್ತು ಗಿರಿಜನ ಉಪಯೋಜನೆಯಡಿ 23 ಅರ್ಜಿಗಳು ಅಕಾಡೆಮಿಯಲ್ಲಿ ಈಗಾಗಲೇ ಸ್ವೀಕೃತವಾಗಿದ್ದು, ಅವುಗಳ ಪರಿಶೀಲನೆಗಾಗಿ 2019 ಡಿಸೆಂಬರ್ 20 ರಂದು ಉಪಸಮಿತಿ ಸಭೆ ಕರೆದು, ವಿಶೇಷಘಟಕ ಯೋಜನೆಯಡಿ ದಾವಣಗೆರೆಯಲ್ಲಿ 10 ದಿನಗಳು ಮತ್ತು ಮಂಗಳೂರಿನಲ್ಲಿ 8 ದಿನಗಳು ನಡೆಯುವ ಶಿಬಿರಗಳಿಗೆ ಒಂದು ಶಿಬಿರಕ್ಕೆ ತಲಾ 20 ಅಭ್ಯರ್ಥಿಗಳಂತೆ ಒಟ್ಟು 40 ಅಭ್ಯರ್ಥಿಗಳನ್ನು ಹಾಗೂ ಕಾಯ್ದಿರಿಸಿದ 5 ಅಭ್ಯರ್ಥಿಗಳನ್ನು, ಗಿರಿಜನ ಉಪಯೋಜನೆಯಡಿ ಹಗರಿಬೊಮ್ಮನಹಳ್ಳಿಯಲ್ಲಿ ನಡೆಯುವ ಶಿಬಿರಕ್ಕೆ 10 ಅಭ್ಯರ್ಥಿಗಳನ್ನು ಹಾಗೂ ಕಾಯ್ದಿರಿಸಿದ 5 ಅಭ್ಯರ್ಥಿಗಳನ್ನು, ನಿಯಮಾನುಸಾರ ಆಯ್ಕೆ ಮಾಡಲು ಸಭೆ ಅನುಮತಿಸಿತು.

ಸಂಪನ್ಮೂಲ ವ್ಯಕ್ತಿಗಳಿಗೆ ದಿನವೊಂದಕ್ಕೆ ತಲಾ ರೂ.5,000/- ಮತ್ತು ದಾವಣಗೆರೆ ಮತ್ತು ಮಂಗಳೂರು ಶಿಬಿರದ ನಿರ್ದೇಶಕರಿಗೆ ತಲಾ ರೂ.20,000/- ಮತ್ತು 10 ದಿನಗಳ ಈ ಶಿಬಿರಗಳಲ್ಲಿ ಭಾಗವಹಿಸುವ ಅಭ್ಯರ್ಥಿಗಳಿಗೆ ತಲಾ ರೂ.8,000/- ನೀಡಲು ಸಭೆ ಅನುಮತಿಸಿತು. **ಎಲ್ಲಾ ಶಿಬಿರಗಳಿಗೆ ಆಹ್ವಾನಪತ್ರಿಕೆ, ಪ್ರಮಾಣಪತ್ರ, ಬ್ಯಾನರ್‌ಗಳನ್ನು ಅಕಾಡೆಮಿಯಿಂದ ವ್ಯವಸ್ಥೆ ಮಾಡಲಾಗುವುದು. ಊಟ, ವಸತಿ, ಫೋಟೋ ಮತ್ತು ವಿಡಿಯೋ, ಸ್ಥಳೀಯ ಆತಿಥ್ಯದ ವ್ಯವಸ್ಥೆಯನ್ನು ಮಾಡುವಲ್ಲಿ ಸದಸ್ಯ ಸಂಚಾಲಕರು ಅಕಾಡೆಮಿಯೊಂದಿಗೆ ಸಹಕರಿಸುವಂತೆ ಕೋರಲಾಯಿತು. ನಿಗದಿತ ಮೊತ್ತದಲ್ಲಿ ನಿಯಮಾನುಸಾರ ವೆಚ್ಚ ಮಾಡಲು ಸಭೆ ಅನುಮೋದಿಸಿತು.**

**ವಿಶೇಷಘಟಕ ಯೋಜನೆಯಡಿ ರಂಗತರಬೇತಿ ಶಿಬಿರ : ನಿಗದಿತ ಮೊತ್ತ ರೂ.5ಲಕ್ಷ**

ಶ್ರೀ ಯಶವಂತ ಸರದೇಶಪಾಂಡೆ ಅವರ ಸಂಚಾಲಕತ್ವದಲ್ಲಿ 2020 ಜನವರಿ 01 ರಿಂದ 10ರವರೆಗೆ ದಾವಣಗೆರೆಯಲ್ಲಿ 20 ಅಭ್ಯರ್ಥಿಗಳನ್ನೊಳಗೊಂಡ 10 ದಿನಗಳ ವಸತಿ ಶಿಬಿರವನ್ನು ನಡೆಸಲು ಸಭೆ ಅನುಮೋದಿಸಿತು.

ಶ್ರೀ ಎಂ.ಕೆ.ಮಠ ಅವರ ಸಂಚಾಲಕತ್ವದಲ್ಲಿ 2020 ಫೆಬ್ರವರಿ 02 ರಿಂದ 9 ರವರೆಗೆ ಮಂಗಳೂರಿನ ಉಪ್ಪಿನಅಂಗಡಿಯಲ್ಲಿ ನಿಗದಿತ ಮೊತ್ತ ರೂ.5ಲಕ್ಷದಲ್ಲಿ 20 ಅಭ್ಯರ್ಥಿಗಳನ್ನೊಳಗೊಂಡ 8 ದಿನಗಳ ವಸತಿ ಶಿಬಿರವನ್ನು ನಡೆಸಲು ಸಭೆ ಅನುಮೋದಿಸಿತು.

ಸಂಪನ್ಮೂಲ ವ್ಯಕ್ತಿಗಳ ವಿವರ ಈ ಕೆಳಗಿನಂತಿದೆ

1. ಶ್ರೀ ಮಹೇಶ್, ರಂಗಾಯಣ
2. ಶ್ರೀಮತಿ ದಾಕ್ಷಾಯಿಣಿ ಭಟ್
3. ಶ್ರೀ ರಾಮಕೃಷ್ಣ ಬೆಳ್ತೂರು 4. ಬಿ.ಆರ್.ಮಧುಸೂಧನ್ 5. ಚರಣ್, ನೀನಾಸಂ

**ಗಿರಿಜನ ಉಪ ಯೋಜನೆಯಡಿ ರಂಗತರಬೇತಿ ಶಿಬಿರ**

ಶ್ರೀ ರಾಜಾರಾವ್ ಅವರ ಸಂಚಾಲಕತ್ವದಲ್ಲಿ 2020 ಜನವರಿ 20 ರಿಂದ 29 ರವರೆಗೆ ಬಳ್ಳಾರಿ ಜಿಲ್ಲೆಯ ಹಗರಿಬೊಮ್ಮನಹಳ್ಳಿಯಲ್ಲಿ ನಿಗದಿತ ಮೊತ್ತ ರೂ.2.50ಲಕ್ಷದಲ್ಲಿ 10 ಅಭ್ಯರ್ಥಿಗಳನ್ನೊಳಗೊಂಡ 10 ದಿನಗಳ ವಸತಿಸಹಿತ ಶಿಬಿರವನ್ನು ನಡೆಸಲು ಸಭೆ ಅನುಮೋದಿಸಿತು. ಶಿಬಿರದ ನಿರ್ದೇಶಕರಾದ ಶ್ರೀ ಪ್ರಭು ಅವರಿಗೆ ರೂ.15,000/-ಗಳ ಸಂಭಾವನೆಯನ್ನು ನೀಡಲು ಮತ್ತು ಸಂಪನ್ಮೂಲ ವ್ಯಕ್ತಿಗಳಿಗೆ ದಿನವೊಂದಕ್ಕೆ ತಲಾ ರೂ.5,000/- ನೀಡಲು ಸಭೆ ಅನುಮತಿಸಿತು.

ಸಂಪನ್ಮೂಲ ವ್ಯಕ್ತಿಗಳ ವಿವರ ಈ ಕೆಳಗಿನಂತಿದೆ

1. ಶ್ರೀ ಲಕ್ಷ್ಮೀಕಾಂತ ಜೋಷಿ
2. ಶ್ರೀ ಅಬ್ದುಲ್ ಸಾಜಿ ಶೇಖ
3. ಶ್ರೀ ಬಿ.ಎಂ.ಎಸ್.ಪ್ರಭು
4. ಶ್ರೀ ಚರಣ್ ಸಿ.ಎಸ್.
5. ಶ್ರೀ ನಾಗರಾಜ ಪತ್ತಾರ
6. ಶ್ರೀ ಸಂತೋಷ ಮಹಾಲೆ

**ಮಾಸಾಶನ ಸಂದರ್ಶನ**

ಕರ್ನಾಟಕ ನಾಟಕ ಅಕಾಡೆಮಿಯು ಸಂದರ್ಶನವನ್ನು 2018-19ನೇ ಸಾಲಿನ ಅಂತ್ಯದವರೆಗೆ ಮತ್ತು 2019-20ನೇ ಸಾಲಿನಲ್ಲಿ ಸ್ವೀಕೃತವಾಗಿರುವ (ಒಟ್ಟು 122 ಅರ್ಜಿಗಳಿಗೆ ಸಂಬಂಧಪಟ್ಟಂತೆ, ನಾಟಕ ಕಲಾವಿದರ ಮಾಸಾಶನ ಸಂದರ್ಶನ ನಡೆಸಿ, ಕೇಂದ್ರ ಕಚೇರಿಗೆ ಶಿಫಾರಸ್ಸು ಮಾಡಬೇಕಿರುವ ಹಿನ್ನಲೆಯಲ್ಲಿ ಮಾಸಾಶನ ಸಮಿತಿಗೆ ಈ ಕೆಳಕಂಡಂತೆ ಸದಸ್ಯರನ್ನು ನೇಮಿಸಲಾಯಿತು. ದಿನಾಂಕ 4-01-2020 ರಂದು ಮಾಸಾಶನ ಸಂದರ್ಶನವನ್ನು ಅಕಾಡೆಮಿಯ ಕಚೇರಿಯಲ್ಲಿ ನಡೆಸಲು ತೀರ್ಮಾನಿಸಲಾಯಿತು.

1. ಶ್ರೀಮತಿ ಪ್ರೇಮಾ ಬಾದಾಮಿ
2. ಶ್ರೀ ಜೋಸೆಫ್
3. ಶ್ರೀ ಎಂ.ಎಸ್.ಗುಣಶೀಲನ್
4. ಶ್ರೀ ವಿನೋದ ಅಂಬೇಕರ್

**ಪುಸ್ತಕ ಬಹುಮಾನ**

2018ನೇ ಸಾಲಿನ ಪುಸ್ತಕ ಬಹುಮಾನಕ್ಕೆ ಅರ್ಜಿಗಳನ್ನು ಆಹ್ವಾನಿಸಿದ್ದು, ಈ ಸಂಬಂಧ 10 ಕೃತಿಗಳು ಅಕಾಡೆಮಿಯಲ್ಲಿ ಸ್ವೀಕೃತವಾಗಿದ್ದು, ಅವುಗಳಲ್ಲಿ ರಂಗಭೂಮಿ ಸಂಬಂಧಿಸಿದ ಮತ್ತು ಷರತ್ತುಗಳನ್ನು ಪೂರೈಸಿದ 6 ಕೃತಿಗಳನ್ನು ಪುಸ್ತಕ ಬಹುಮಾನದ ಆಯ್ಕೆಗಾಗಿ ಈ ಕೆಳಕಂಡ 3 ಜನರನ್ನು ತೀರ್ಪುಗಾರರನ್ನಾಗಿ ಸಭೆ ನೇಮಿಸಿತು. ಜನವರಿ 15ರೊಳಗೆ ಪುಸ್ತಕದ ಆಯ್ಕೆಯನ್ನು ಮಾಡಿಕೊಡಬೇಕೆಂದು ತಿಳಿಸಲು ಸಭೆ ಸಮ್ಮತಿಸಿತು. ಅವರಿಗೆ ಸಂಭಾವನೆಯಾಗಿ ತಲಾ ರೂ.5,000/-ಗಳನ್ನು ನೀಡಲು ಸಭೆ ಅನುಮೋದಿಸಿತು.

1. ಶ್ರೀ ಚಂದ್ರಶೇಖರ ವಸ್ತ್ರದ, ಗದಗ
2. ಡಾ.ನಿರ್ಮಲ ಎಲಿಗಾರ, ಬೆಂಗಳೂರು
3. 3.ಶ್ರೀ ಟಿ.ಎಂ.ಸತೀಶ್, ಬೆಂಗಳೂರು

**ಹಾವೇರಿಯಲ್ಲಿ ಪೌರಾಣಿಕ ನಾಟಕೋತ್ಸವ**

ಕರ್ನಾಟಕ ನಾಟಕ ಅಕಾಡೆಮಿಯಿಂದ 2020 ಜನವರಿ 26 ರಿಂದ 28ರವರೆಗೆ 3 ದಿನಗಳ ಪೌರಾಣಿಕ ನಾಟಕೋತ್ಸವವನ್ನು ಹಾವೇರಿಯಲ್ಲಿ ಸದಸ್ಯರಾದ ಶ್ರೀ ಶಿವಪ್ಪ ಭರಮಪ್ಪ ಅದರಗುಂಚಿ ಅವರ ಸಂಚಾಲಕತ್ವದಲ್ಲಿ ನಡೆಸಲು ತೀರ್ಮಾನಿಸಿದ್ದು. ನಾಟಕಗಳ ಮತ್ತು ತಂಡಗಳ ಆಯ್ಕೆಯನ್ನು ಮುಂದಿನ ಸಭೆಯಲ್ಲಿ ಅಂತಿಮಗೊಳಿಸಲು ಸಭೆ ತೀರ್ಮಾನಿಸಿತು. ನಾಟಕೋತ್ಸವಕ್ಕೆ ನಿಗದಿಪಡಿಸಿರುವ **ಮೊತ್ತ ರೂ.6ಲಕ್ಷ**. ವೇಷಭೂಷಣ, ಸೀನರಿ, ಮೇಕಪ್, ಸಾರಿಗೆ ವೆಚ್ಚದ ಮೊತ್ತ ಮತ್ತು ತಂಡದ ಸಂಭಾವನೆಗಳನ್ನೊಳಗೊಂಡಂತೆ ಪ್ರತಿ ತಂಡಕ್ಕೆ ಮೊತ್ತ ರೂ.90,000/- ನೀಡಲು ಸಭೆ ಅನುಮೋದಿಸಿತು.

ಆಹ್ವಾನಪತ್ರಿಕೆ, ಕರಪತ್ರ ಪ್ರಮಾಣಪತ್ರ, ಬ್ಯಾನರ್‌ಗಳನ್ನು ಅಕಾಡೆಮಿಯಿಂದ ವ್ಯವಸ್ಥೆ ಮಾಡಲಾಗುವುದು. ಊಟ, ವಸತಿ, ರಂಗಮಂದಿರ ಬಾಡಿಗೆ, ಫೋಟೋ ಮತ್ತು ವಿಡಿಯೋ, ಸ್ಥಳೀಯ ಆತಿಥ್ಯದ ವ್ಯವಸ್ಥೆಯನ್ನು ಅಕಾಡೆಮಿ ಮಾಡಲು ಸದಸ್ಯ ಸಂಚಾಲಕರು ಅಕಾಡೆಮಿಯೊಂದಿಗೆ ಸಹಕರಿಸುವಂತೆ ಕೋರಲಾಯಿತು. **ತಂಡದ ಎಲ್ಲಾ ಕಲಾವಿದರುಗಳಿಗೆ ಅಕಾಡೆಮಿಯ ಪ್ರಕಟಣೆಗಳನ್ನು ಉಚಿತವಾಗಿ ನೀಡಲು ಸಭೆ ಅನುಮೋದಿಸಿತು.** ನಾಟಕೋತ್ಸವದ ಎಲ್ಲಾ ವೆಚ್ಚಗಳನ್ನು ನಿಯಮಾನುಸಾರ ನಿಗದಿಪಡಿಸಿರುವ ಮೊತ್ತದಲ್ಲಿ ಭರಿಸಲು ಸಭೆ ಅನುಮೋದಿಸಿತು.

**ಅಧ್ಯಕ್ಷರ ಅನುಮತಿ ಮೇರೆಗೆ ಇತರೆ ವಿಷಯಗಳು**

* 2020 ಜನವರಿ 3ನೇ ತಾರೀಖು ನಾಟಕ ಅಕಾಡೆಮಿಯ ಪ್ರಶಸ್ತಿ ಸಂಬಂಧ ಸರ್ವಸದಸ್ಯರ ಸಭೆಯನ್ನು ಕರೆಯಲು ಸಭೆ ಅನುಮೋದಿಸಿತು.

* 2020 ಫೆಬ್ರವರಿ 29 ರಂದು ಅಕಾಡೆಮಿಯ ಪ್ರಶಸ್ತಿ ಸಮಾರಂಭವನ್ನು ಏರ್ಪಡಿಸುವ ಬಗ್ಗೆ ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಲು ಸಭೆ ತೀರ್ಮಾನಿಸಿತು.

**2019 ವಾರ್ಷಿಕ ಪ್ರಶಸ್ತಿ ಸಂಬಂಧದ ನಿಯಮಗಳು- ಈ ನಿಯಮಗಳನ್ನು ಸರ್ವಸದಸ್ಯರ ಸಭೆಯಲ್ಲಿ ಚರ್ಚಿಸಿ ಅಂತಿಮಗೊಳಿಸಲು ತೀರ್ಮಾನಿಸಲಾಯಿತು.**

1. ರಂಗಭೂಮಿಯಲ್ಲಿ ಕನಿಷ್ಠ 20 ವರ್ಷ ಸೇವೆ ಸಲ್ಲಿಸಿರಬೇಕು
2. ಯಾವುದೇ ಅಕಾಡೆಮಿಯಲ್ಲಿ ಯಾವುದೇ ಪ್ರಕಾರದಲ್ಲಿ ಪ್ರಶಸ್ತಿ ಪಡೆದವರನ್ನು ಪರಿಗಣಿಸುವಂತಿಲ್ಲ.
3. ವಾರ್ಷಿಕ ಪ್ರಶಸ್ತಿಗೆ ವಯಸ್ಸಿನ ಮಿತಿ 50 ವರ್ಷ
4. ರಾಜ್ಯಪ್ರಶಸ್ತಿ ಹಾಗೂ ಸರ್ಕಾರದ ಯಾವುದೇ ಪ್ರಶಸ್ತಿಯನ್ನು ಪಡೆದಿರಬಾರದು
5. ಗೌರವ ಪ್ರಶಸ್ತಿಗೆ ವಯಸ್ಸಿನ ಮಿತಿ 60 ವರ್ಷ

**ಸಭೆಗೆ ಬಂದ ಪತ್ರಗಳು**

1. ಬೆಂಗಳೂರು ನಗರ ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ತು,ಬೆಂಗಳೂರು ಇವರು ಸಮ್ಮೇಳನಕ್ಕೆ ನಾಟಕ ಪ್ರಾಯೋಜಿಸಲಾಗಿದ್ದು, ಸಮ್ಮೇಳನ ಮುಂದೂಡಿದ್ದರಿಂದ ಮತ್ತೇ ನಾಟಕ ಪ್ರಾಯೋಜನೆ ನೀಡಬೇಕಾಗಿ ವಿನಂತಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿಯಿಂದ ಪ್ರಾಯೋಜನೆಗೆ ಅವಕಾಶವಿರುವುದಿಲ್ಲವಾದ್ದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

2. ರಂಗಚೇತನ ಯುವಕರ ಸಂಘ, ಕೋಲಾರ ತಾ:ಜಿಲ್ಲೆ ಇವರು ರಂಗತರಬೇತಿ ಶಿಬಿರಕ್ಕೆ ಧನಸಹಾಯ ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿಯಿಂದ ಧನಸಹಾಯಕ್ಕೆ ಅವಕಾಶವಿರುವುದಿಲ್ಲವಾದ್ದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

3. ಶ್ರೀ ಮಾರುತಿ ಬಾಬು ಭಜಂತ್ರಿ, ಬೆಳಗಾವಿ ಇವರು ನಾಟಕೋತ್ಸವಕ್ಕೆ ವಿಶೇಷಘಟಕ ಮತ್ತು ಗಿರಿಜನ ಯೋಜನೆಯಡಿಯಲ್ಲಿ ಅನುದಾನ ಬಿಡುಗಡೆ ಮಾಡಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿಯಿಂದ ಅನುದಾನ ಬಿಡುಗಡೆಗೆ ಅವಕಾಶವಿರುವುದಿಲ್ಲವಾದ್ದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

4. ಇಳಕಲ್‌ನಲ್ಲಿ ವೃತ್ತಿರಂಗ ಭೂಮಿಗೆ ರಂಗಪರದೆಗೆ ಪೇಂಟಿಂಗ್ ತರಬೇತಿ ಶಿಬಿರ ನಡೆಸಲು ಮತ್ತು 10 ದಿನ ಪ್ರಸಾಧನ ಶಿಬಿರ ನಡೆಸಲು ಅನುಮತಿಗಾಗಿ ಮನವಿ ಸಲ್ಲಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿಯಿಂದ ತರಬೇತಿ ಶಿಬಿರ ನಡೆಸುತ್ತಿರುವುದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

5. ಅಜ್ಜಂಪುರ ಜಿ ಸೂರಿ ಪ್ರತಿಷ್ಠಾನ ಟ್ರಸ್ಟ್(ರಿ),ಚಿಕ್ಕಮಗಳೂರು ಇವರು ನಾಟಕ ಕಾರ್ಯಕ್ರಮ ಮಾಡಲು ಅವಕಾಶ ನೀಡಲು ಮನವಿ ಸಲ್ಲಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಕಾಡೆಮಿಯಿಂದ ನಾಟಕೋತ್ಸವಗಳು ನಡೆಯುತ್ತಿರುವುದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

6. ಅನ್ನಪೂರ್ಣ ಪಬ್ಲಿಕೇಷನ್ಸ್ & ಕ್ರಿಯೇಶನ್ಸ್,ಸಿರಿಗೇರಿ ಇವರು ವಿಚಾರಸಂಕಿರಣವನ್ನು ಹಮ್ಮಿಕೊಳ್ಳಲು ಸಹಯೋಗ ನೀಡಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು.

7. ರಂಗಸ್ವರೂಪ, ಸಾಗರ ಸಂಸ್ಥೆಗೆ ನಾಟಕ ಪ್ರದರ್ಶನಕ್ಕೆ ಅಕಾಡೆಮಿ ಕಾರ್ಯಕ್ರಮಗಳಲ್ಲಿ ಅವಕಾಶ ನೀಡಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

8. ವೀರು ಥಿಯೇಟರ್ ಟ್ರಸ್ಟ್,ಬೆಳಗಾವಿ ಇವರ ಪಪಟ್ ನಾಟಕ ಪ್ರದರ್ಶನಕ್ಕೆ ಸಹಾಯಧನ ನೀಡಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

9. ಜನಪದ ಕಲಾವಿದರ ಬಳಗ(ರಿ)ಬೀದರ್ 5 ದಿನಗಳ ಕಾಲ ನಡೆಯುವ ರಾಜ್ಯಮಟ್ಟದ ನಾಟಕೋತ್ಸವಕ್ಕೆ ನಾಟಕ ತಂಡಗಳನ್ನು ಆಯೋಜನೆ ಮಾಡಲು ವಿನಂತಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

10. ಡಾ.ರಂಗಾರೆಡ್ಡಿ ಕೋಡಿರಾಂಪುರ, ಇವರು ಚಿಕ್ಕಬಳ್ಳಾಪುರ ಜಿಲ್ಲೆಯ ರಂಗ ಕಲಾವಿದರ ಮಾಹಿತಿ ಸಿದ್ಧಪಡಿಸಲು ಸಾಧ್ಯವಾಗುವುದಿಲ್ಲವೆಂದು ತಿಳಿಸಿ ಪತ್ರ ನೀಡಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಶ್ರೀ ಕೆ.ವಿ.ನಾಯಕ್ ಅವರಿಗೆ ಚಿಕ್ಕಬಳ್ಳಾಪುರ ಜಿಲ್ಲೆಯ ರಂಗಮಾಹಿತಿ ಸಿದ್ಧಪಡಿಸಲು ಅವಕಾಶ ನೀಡಲು ಸಭೆ ತೀರ್ಮಾನಿಸಿತು.

11. ಸುಯೋಧನ ಸಾಂಸ್ಕೃತಿಕ ವೇದಿಕೆ,ಬಳ್ಳಾರಿ ಇವರು ರಂಗಸಂಕ್ರಾಂತಿ ನಾಟಕೋತ್ಸವಕ್ಕೆ ಧನಸಹಾಯ ಕೋರಿ ಮನವಿ ಸಲ್ಲಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಧನಸಹಾಯಕ್ಕೆ ಅವಕಾಶವಿಲ್ಲದ ಕಾರಣ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

12. ನಾಟಕ ಬೆಂಗಳೂರು ಇವರು ನಾಟಕ ಬೆಂಗಳೂರು-19, 12ನೇ ವರ್ಷದ ರಂಗಭೂಮಿ ಸಂಭ್ರಮ ಪ್ರಚಾರ ಸಾಮಗ್ರಿ ಪ್ರಾಯೋಜಿಸಲು ಕೋರಿ ಮನವಿ ಸಲ್ಲಿಸುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಧ್ಯಕ್ಷರ ವಿವೇಚನೆಯ ಲೆಕ್ಕಶೀರ್ಷಿಕೆಯಡಿ ರೂ.15,000/-ಗಳನ್ನು ಈ ಸಂಸ್ಥೆಗೆ ಪ್ರಚಾರಕ್ಕಾಗಿ ನೀಡಲು ಸಭೆ ಸಮ್ಮತಿಸಿತು.

13. ಸಂಚಲನ ಮೈಸೂರು ಇವರು ಸಂಚಲನ ಮಕ್ಕಳ ನಾಟಕೋತ್ಸವಕ್ಕೆ ಅಕಾಡೆಮಿಯ ಸಹಯೋಗ ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

14. ಮೆಟ್ರೋ ಪೆಲೋಟಿನ್ ಮೀಡಿಯಾ ಕಂಪನಿ ಲಿಮಿಟೆಡ್,ಬೆಂಗಳೂರು ಇವರು ವಿಜಯ ಕರ್ನಾಟಕ ಕನ್ನಡ ಹಬ್ಬದ ನಾಟಕ ಪ್ರದರ್ಶನದ ವೆಚ್ಚವನ್ನು ಅಕಾಡೆಮಿಯಿಂದ ಭರಿಸಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅನುದಾನದ ಕೊರತೆಯಿರುವುದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

15.ಸಮುದಾಯ, ಧಾರವಾಡ ಇವರು ಗಿರೀಶ್ ಕರ್ನಾಡ್ ಸ್ಮರಣಾರ್ಥ ನಾಟಕೋತ್ಸವಕ್ಕೆ ಅಕಾಡೆಮಿಯಿಂದ ಹೆಚ್ಚಿನ ಅನುದಾನ ನೀಡಲು ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅಧ್ಯಕ್ಷರ ವಿವೇಚನೆಯ ಲೆಕ್ಕಶೀರ್ಷಿಕೆಯಲ್ಲಿ ರೂ.15,000/-ಗಳನ್ನು ಈ ಸಂಸ್ಥೆಗೆ ನೀಡಲು ಸಭೆ ಸಮ್ಮತಿಸಿತು.

16. ಒಡ್ಡೋಲಗ(ರಿ) ಹಿಸ್ಲಕ್ಯೆ ಇವರು ಅಕಾಡೆಮಿ ನಾಟಕೋತ್ಸವದಲ್ಲಿ ನಾಟಕ ಪ್ರದರ್ಶನಕ್ಕೆ ಅವಕಾಶ ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಅನುದಾನದ ಕೊರತೆಯಿರುವುದರಿಂದ ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

17. ನೃತ್ಯನಿಕೇತನ ಕೊಡವೂರು ಇವರು ಸಿದ್ದಾಪುರದಲ್ಲಿ ನಡೆಯುವ ನಾಟಕೋತ್ಸವದಲ್ಲಿ ಅವಕಾಶವನ್ನು ಕೋರಿರುತ್ತಾರೆ

ಈ ಸಂಸ್ಥೆಗೆ ಸಿದ್ದಾಪುರ ನಾಟಕೋತ್ಸವದಲ್ಲಿ ಅವಕಾಶ ನೀಡಲು ಸಭೆ ಸಮ್ಮತಿಸಿತು.

18. ರಮಾನಂದ ಐನಕ್ಕೆ ಇವರು ದ್ದಾಪುರದಲ್ಲಿ ನಡೆಯುವ ನಾಟಕೋತ್ಸವದಲ್ಲಿ ಅವಕಾಶವನ್ನು ಕೋರಿರುತ್ತಾರೆ

ಈ ಸಂಸ್ಥೆಗೆ ಸಿದ್ದಾಪುರ ನಾಟಕೋತ್ಸವದಲ್ಲಿ ಅವಕಾಶ ನೀಡಲು ಸಭೆ ಸಮ್ಮತಿಸಿತು.

19. ಕೆ.ವಿ.ಸುಬ್ಬಣ್ಣ ರಂಗಸಮೂಹ(ರಿ) ಶಿವಮೊಗ್ಗ ಇವರು ನಾಟಕ ಅಕಾಡೆಮಿಯ ನಾಟಕೋತ್ಸವದಲ್ಲಿ ( ಸಿದ್ದಾಪುರ ಅಥವಾ ಇನ್ನಾವುದೇ ಊರುಗಳಲ್ಲಿ) ಅವಕಾಶವನ್ನು ಕೋರಿರುತ್ತಾರೆ.

ಈ ಸಂಸ್ಥೆಗೆ ಸಿದ್ದಾಪುರ ನಾಟಕೋತ್ಸವದಲ್ಲಿ ಅವಕಾಶ ನೀಡಲು ಸಭೆ ಸಮ್ಮತಿಸಿತು.

20. ಸಗರನಾಡು ಸೇವಾ ಪ್ರತಿಷ್ಠಾನ(ರಿ) ಯಾದಗಿರಿ ಇವರು ಯಾದಗಿರಿ ಜಿಲ್ಲೆಯಲ್ಲಿ ನಾಟಕೋತ್ಸವ ಕಾರ್ಯಕ್ರಮ ಆಯೋಜಿಸಲು ಸಹಕಾರ ಮತ್ತು ಸಹಯೋಗ ಕೋರಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಈ ಮನವಿಯನ್ನು ಕೈಬಿಡಲು ಸಭೆ ತೀರ್ಮಾನಿಸಿತು

21. ಅಕಾಡೆಮಿಯ ಗ್ರಂಥಾಲಯದಲ್ಲಿ ಲಭ್ಯವಿರುವ ನಾಟಕಗಳ ಹಕ್ಕುಗಳನ್ನು ಹೊಂದಿರುವವರಿಂದ ಅನುಮತಿ ಪಡೆದು ಪಿ.ಡಿ.ಎಫ್ ಮಾಡಿ ವೆಬ್‌ಸೈಟ್‌ನಲ್ಲಿ ಅಳವಡಿಸುವ ಬಗ್ಗೆ.

ಅಕಾಡೆಮಿಯ ಗ್ರಂಥಾಲಯದಲ್ಲಿ ಲಭ್ಯವಿರುವ ನಾಟಕಗಳ ಹಕ್ಕುಗಳನ್ನು ಹೊಂದಿರುವವರಿಂದ ಅನುಮತಿ ಪಡೆದು ಪಿ.ಡಿ.ಎಫ್ ಮಾಡಿ ವೆಬ್‌ಸೈಟ್‌ನಲ್ಲಿ ಅಳವಡಿಸಲು ಸಭೆ ಸಮ್ಮತಿಸಿತು.

22. ಡಾ.ಗುಬ್ಬಿ ವೀರಣ್ಣ ಟ್ರಸ್ಟ್, ತುಮಕೂರು ಇವರು ವೃತ್ತಿ ನಾಟಕ ಕಂಪನಿಯ ನಾಟಕಗಳ ಉತ್ಸವಕ್ಕೆ ಸಹಕಾರ ಕೋರಿ ಮನವಿ ಸಲ್ಲಿಸಿರುತ್ತಾರೆ.

ಮನವಿಯನ್ನು ಪರಿಶೀಲಿಸಿದ ಸಭೆಯು ಮುಂದಿನ ದಿನಗಳಲ್ಲಿ ಪರಿಗಣಿಸಲು ಸಭೆ ತೀರ್ಮಾನಿಸಿತು

ರಿಜಿಸ್ಟ್ರಾರ್ ವಂದನೆ ಸಲ್ಲಿಸುವುದರ ಮೂಲಕ ಸಭೆ ಮುಕ್ತಾಯವಾಯಿತು

04.01.2020

(ಪ್ರೊ.ಭೀಮಸೇನ.ಆರ್)
ಅಧ್ಯಕ್ಷರು
ಕರ್ನಾಟಕ ನಾಟಕ ಅಕಾಡೆಮಿ

4/1/2020

(ಡಾ.ಶೈಲಜಾ ಎ.ಸಿ)
ರಿಜಿಸ್ಟ್ರಾರ್
ಕರ್ನಾಟಕ ನಾಟಕ ಅಕಾಡೆಮಿ